
# ಕೋಟೆ ಒಂದು ನೋಟ ಎರಡು





ಚಿತ್ರದುರ್ಗ ಕೋಟೆಯನ್ನೋ ಮಧುಗಿರಿ ಕೋಟೆಯನ್ನೋ ವರ್ಷದ ಯಾವ ಕಾಲದಲ್ಲಿ ನೋಡಿದರೂ ಅಂತಹ ವ್ಯತ್ಯಾಸವಿರದು. ಆದರೆ ಶಿವಮೊಗ್ಗ ಜಿಲ್ಲೆಯ ಬಿದನೂರಿನ ಕೋಟೆ ಅದಕ್ಕೆ ತದ್ವಿರುದ್ಧ. ಅದು ಜನವರಿಯಲ್ಲಿ ಕಾಣುವ ರೀತಿಯೇ ಬೇರೆ. ಜುಲೈನಲ್ಲಿ ಕಾಣುವ ಸೊಬಗೇ ಬೇರೆ.

2012 ಜನವರಿಯಲ್ಲಿ ಅಲ್ಲಿಗೆ ಹೋದಾಗ ಎತ್ತ ನೋಡಿದರೂ ಒಣಗಿದ ನೋಟ. 2019ರ ಜುಲೈನಲ್ಲಿ ಮತ್ತೆ ಅಲ್ಲಿಗೆ ಹೋಗುವ ಅವಕಾಶ. ಆದರೆ ಈ ಬಾರಿ ಇಡೀ ಕೋಟೆ ಅತ್ಯಾಕರ್ಷಕವಾಗಿತ್ತು. ಹಸಿರು ಚಿಮ್ಮುತ್ತಿತ್ತು. ಕೋಟೆ ಹಿಂಭಾಗದ ಕೆರೆ, ಬಾಗಿ ಬಳುಕಿ ಹರಿಯುವ ಹಳ್ಳ, ತುಂತುರು ಮಳೆ, ಕೈಗೆಟುಕುವಂತೆ ಕಾಣುವ ಕಪ್ಪು ಮೋಡಗಳು ಕೋಟೆಗೆ ಹೊಸ ಮೆರುಗು ನೀಡಿದ್ದವು.

ಆದರೆ ಈ ಏಳು ವರ್ಷಗಳಲ್ಲಿ ಕೋಟೆಯ ನಿರ್ವಹಣೆಯೇ ಆಗಿಲ್ಲ ಎನ್ನಬಹುದು. ಬದಲಿಗೆ ಜಂಬಿಟ್ಟಿಗೆಯಿಂದ ಅಲ್ಲಲ್ಲಿ ನಿರ್ಮಿಸಿರುವ ತಡೆಗೋಡೆಗಳು ದೃಷ್ಟಿಬೊಟ್ಟಿನಂತೆ ಭಾಸವಾಗಿ ಅಂದಗೆಡಿಸಿದೆ. ಕೋಟೆಯನ್ನು ನಿರ್ಮಿಸಿದ ಬಣ್ಣದ ಕಲ್ಲುಗಳನ್ನೇ ಬಳಸಿದ್ದರೆ ಚೆನ್ನಾಗಿರುತ್ತಿತ್ತು.

ಹೊಸನಗರ ತಾಲ್ಲೂಕಿನಲ್ಲಿನ ಈ ಕೋಟೆಗೆ ತಾಲ್ಲೂಕುಕೇಂದ್ರದಿಂದ 15 ಕಿ.ಮೀ. ದೂರ. ವೇಣುಪುರ ಎನ್ನುವುದು ಇತಿಹಾಸ ಪುಟಗಳಲ್ಲಿನ ಇದರ ಇನ್ನೊಂದು ಹೆಸರು. ಕೆಳದಿ, ಇಕ್ಕೇರಿಗಳಲ್ಲಿ ಆಳಿದ ಅರಸರು 1640ರ ಸುಮಾರಿಗೆ ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು, 'ಬಿದನೂರು ಅರಸರು' ಎಂದು ಪ್ರಸಿದ್ಧರಾಗಿದ್ದರಂತೆ. ಕೊಳಗಳು, ಅರಮನೆಯ ಅವಶೇಷಗಳು ಕೋಟೆಯ ಬಯಲಿನಲ್ಲಿ ಕಾಣಿಸುತ್ತವೆ. ■

■ ಚಿತ್ರಪಟ ಕಥನ:

**ಮಲ್ಲಿಕಾರ್ಜುನ ಹೊಸಪಾಳ್ಯ**





